**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1033/23**

ಪ್ರಾಸಾ5
?ಚಾಸಾ5

ಸಾಕ್ಷಿಯ ಹೆಸರುಃ ತೀರ್ಥಾನಂದ
ತಂದೆ /ಗಂಡನ ಹೆಸರು ಃ ಪೊನ್ನಪ್ಪ
ವಯಸ್ಸು ಃ 35
ಉದ್ಯೋಗ ಃ ವ್ಯವಸಾಯ
ವಾಸ ಸ್ಥಳ ಃ ಅರಿಶಿಣಗುಪ್ಪೆ ಗ್ರಾಮ, ಕುಶಾಲನಗರ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 12.12.2024**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ದಿಃ 09.03.2023 ರಂದು ಬೆಳಗ್ಗೈ 11.45 ಕ್ಕೆ ನಾನು ಕೂಡ್ಲೂರು ಬಳಿ ಹೋಗುತ್ತಿದ್ದಾಗ ಪೋಲಿಸರು ನನ್ನನ್ನು ಕರೆದು ಗಲಾಟೆ ವಿಚಾರವಾಗಿ ಸ್ಕೂಟರನ್ನು ಅಮಾನತು ಪಡಿಸಿಕೊಂಡಿದ್ದು ಮಹಜರಗೆ ಸಹಕರಿಸುವಂತೆ ಕೇಳಿದ್ದು ಅದಕ್ಕೆ ನಾನು ಒಪ್ಪಿದ್ದು ಪೋಲಿಸ ಠಾಣೆಗೆ ಹೋಗಿದ್ದು ಅಲ್ಲಿ ಸಂಖ್ಯೆ ಕೆ ಎ 12 ಕ್ಯೂ 1470 ಸ್ಕೂಟಿ ಇದ್ದು ನನ್ನ ಸಮಕ್ಷಮ ಪೋಲಿಸರು ಮಹಜರ ಕ್ರಮ ಜರುರಿಸಿರುತ್ತಾರೆ. ಆಗ ನನ್ನೊಂದಿಗೆ ಚಾಸಾ 4 ಮತ್ತು ಆರೋಪಿ ಹಾಜರಿದ್ದರು. ಸದರಿ ಮಹಜರನ್ನು 11.45 ರಿಂದ 12.30 ಒಳಗೆ ತಯಾರಿಸಲಾಯಿುತು. ಸದರಿ ಮಹಜರಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರನ್ನು ನಾನು ಓದಿ ಸಹಿ ಮಾಡಿರುತ್ತೇನೆ .

ಸಾಕ್ಷಿ ಸ್ವತ್ತು ಅಮಾನತು ಮಹರಜನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದ್ದು , ಸಾಕ್ಷಿ ಸಹಿಯನ್ನು ನಿಪಿ 5 ಬಿ ಎಂದು ಗುರುತಿಸಲಾಯಿುತು.

ಪಾಟಿ ಸವಾಲುಃ ಶ್ರೀ ಸಿ ಬಿ ಸಿ ವಕೀಲರಿಂದ

ಯಾವ ವಿಚಾರಕ್ಕಾಗಿ ನನ್ನ ಬಾಬ್ತು ಸ್ಕೂಟಿಯನ್ನು ಪೋಲಿಸ ಠಾಣೆಯಲ್ಲಿ ಹಾಜರು ಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಪೋಲಿಸ ಠಾಣೆಯಲ್ಲಿ **2** ಸಹಿ ಮಾಡಿರುತ್ತೇನೆ. ನಾನು **2** ಸಹಿಯನ್ನು ಮಹಜರಗೆ ಮಾಡಿದ್ದು ಅದನ್ನು ಓದಿ ತಿಳಿದುಕೊಂಡು ಮಾಡಿರುತ್ತೇನೆ. ನಿಪಿ **5** ಗಣಕೀಕೃತ ಮಹಜರ ಆಗಿರುತ್ತದೆ. ನನ್ನ ಸಮಕ್ಷಮ ಯಾವುದೆ ಮಹಜರ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಮಹಜರಗೆ ಹಾಜರಾಗಲು ಪೋಲಿಸರು ನನಗೆ ನೋಟಿಸನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೆ ವಾಹನವನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.